ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ
Karnataka State Rural Development and Panchayat Raj University

ರೈತ ಭವನ, ಜನರಲ್‌ಕಾರ್ಯಪ್ಪ ವೃತ್ತ, ಗದಗ– 582 101
RaithaBhavana, General Cariappa Circle, Gadag – 582 101
E-mail: ksrdpruadmissions@gmail.com Phone: 08372-230338, Fax: 08372-297343

Article on National Education Policy 2020 published by Dr.Shantosh Shetty , Faculty KSRDPR University published in Kannada Prabha Daily Kannada Newspaper on 27.08.2021

ಪ್ರಾಚೀನ ಮೌಲ್ಯಗಳನ್ನು ಮರುಸ್ಥಾಪಿಸುವ, ಇಂದಿನ–ಭವಿಷ್ಯದ ಸವಾಲುಗಳಿಗೆ ಉತ್ತರಿಸುವ ಎನ್‌ಇಪಿ

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಏಕೆ ಬೇಕು?

ಡಾ। ಸಂತೋಷ್ ಕುಮಾರ್

ಕಳೆದ 200 ವರ್ಷಗಳಿಂದ ಬೆಳೆದುಬಂದ ಮೆಕಾಲೆ ಶಿಕ್ಷಣ ಪದ್ಧತಿಯಲ್ಲಿ ಕಾಲಕ್ರಮೇಣ ಬಹುಶಿಸ್ತೀಯ ಅಧ್ಯಯನ ಕಣ್ಮರೆಯಾಗತೊಡಗಿತು. ಆದರಿಂದ ವಿದ್ಯಾರ್ಥಿಗಳು ಕೂಪ ಮಂಡೂಕಗಳಾಗುತ್ತಾ ಬಂದರು. ಇಂತಹ ಕೂಪದಿಂದ ವಿದ್ಯಾರ್ಥಿಗಳನ್ನು ಹೊರತಂದು ಕೌಶಲ್ಯಯುಕ್ತ ಮತ್ತು ಸಾಮಾಜಿಕ ಮೌಲ್ಯಾಧಾರಿತ ಶಿಕ್ಷಣ ನೀಡುವ ನಿಟ್ಟಿನಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ದಿಟ್ಟ ಹೆಜ್ಜೆ ಇಟ್ಟಿದೆ.

ಕಳೆದ ವರ್ಷದ ಜುಲೈನಲ್ಲಿ ಭಾರತ ಸರ್ಕಾರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಿತು. ಶೈಕ್ಷಣಿಕ, ಬೌದ್ಧಿಕ ಮತ್ತು ಸಾರ್ವಜನಿಕ ವಲಯದಲ್ಲಿ ಶಿಕ್ಷಣ ನೀತಿಯ ಪೂರ್ವಾಪರಗಳ ಕುರಿತು ವ್ಯಾಪಕ ಚರ್ಚೆಯೂ ಆಯಿತು. ಭಾರತದಲ್ಲಿ ಜಾರಿಗೆ ಬಂದಿರುವ ಮೂರನೇ ರಾಷ್ಟ್ರೀಯ ಶಿಕ್ಷಣ ನೀತಿ ಇದಾಗಿದೆ. ಪ್ರಥಮ ಬಾರಿಗೆ ಇಂದಿರಾ ಗಾಂಧಿ ಪ್ರಧಾನಿಯಾಗಿದ್ದಾಗ ಕೊಥಾರಿ ಆಯೋಗದ ಶಿಫಾರಸುಗಳನ್ನು ಪರಿಶೀಲಿಸಿ 1968ರಲ್ಲಿ ಪ್ರಥಮ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತಂದರು. ಆದರಲ್ಲಿ ಕಲಿಕಾ ಭಾಷೆಯ ಕುರಿತು ಹೆಚ್ಚಿನ ಆಸಕ್ತಿ ಮಹಿಸಲಾಗಿತ್ತು ಹಾಗೂ 14 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ಪ್ರತಿಪಾದಿಸಲಾಗಿತ್ತು. ಆದಾದ ನಂತರ 1986ರಲ್ಲಿ ರಾಜೀವ್ ಗಾಂಧಿ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಎರಡನೇ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆತರಲಾಯಿತು. ಆದರಲ್ಲಿ ಪ್ರಮುಖವಾಗಿ ಶಿಕ್ಷಣದ ಸಮಾನ ಅವಕಾಶದ ಮತ್ತು ಸಾಮಾಜಿಕ ಸಮಗ್ರತೆಯ ಕಡೆಗೆ ಹೆಚ್ಚು ಒತ್ತನ್ನು ನೀಡಲಾಗಿತ್ತು. ಮೂರನೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು 2020ರಲ್ಲಿ ಜಾರಿಗೆ ತರಲಾಯಿತು.

ಮಾತೃಭಾಷೆಗೆ ಆದ್ಯತೆ

2020ರ ರಾಷ್ಟ್ರೀಯ ಶಿಕ್ಷಣ ನೀತಿಯು ನಿರ್ದಿಷ್ಟವಾಗಿ ಮಹತ್ತರ ಬದಲಾವಣೆಗಳನ್ನು ಶಿಕ್ಷಣ ಕ್ಷೇತ್ರದಲ್ಲಿ ತರುವ ಉದ್ದೇಶ ಹೊಂದಿದೆ. ಶಿಕ್ಷಾ ಪ್ರವೇಶದಿಂದ ಉನ್ನತ ಶಿಕ್ಷಣದವರೆಗೂ ನವೀನ ತಂತ್ರಜ್ಞಾನಗಳನ್ನು ಬಳಸಿಕೊಂಡು ಕೌಶಲಯುತ ಸಮೂಹವನ್ನು ಕಟ್ಟುವ ಉದ್ದೇಶ ಹೊಂದಲಾಗಿದೆ. ಈ ನಿಟ್ಟಿನಲ್ಲಿ ಉನ್ನತ ಶಿಕ್ಷಣದ ಕುರಿತು ಶಿಕ್ಷಣ ನೀತಿ ಹೊಂದಿರುವ ಉದ್ದೇಶಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಇದರಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದ ಅಂಶಗಳೆಂದರೆ, ಬಹುಶಿಸ್ತೀಯ ಅಧ್ಯಯನ, ವಿವಿಧ ಹಂತಗಳಲ್ಲಿ ಪ್ರವೇಶ ಮತ್ತು ನಿರ್ಗಮನ, ಕೌಶಲ್ಯಾಧಾರಿತ ಶಿಕ್ಷಣ ಹಾಗೂ ಮಾತೃಭಾಷೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಈ ಶಿಕ್ಷಣ ನೀತಿ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತದೆ.

ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳನ್ನು ಅರ್ಥಮಾಡಿಕೊಳ್ಳಲು ನಾವು ಇನ್ನೆರಡು ಸಂಗತಿಗಳನ್ನು ಗಮನಿಸಬೇಕಾಗುತ್ತದೆ. ಮೊದಲನೆಯದು ಭಾರತಕ್ಕೆ ಬ್ರಿಟಿಷರು ಬರುವ ಮುನ್ನ ಇದ್ದ ಶಿಕ್ಷಣ ನೀತಿ ಹಾಗೂ ಎರಡನೆಯದು 19ನೇ ಶತಮಾನದಲ್ಲಿ ಪ್ರಾರಂಭವಾದ ಹಂಬೋಲ್ಟ್ ಉನ್ನತ ಶಿಕ್ಷಣ ಮಾದರಿ.

ಬಹುಶಿಸ್ತೀಯ ಅಧ್ಯಯನ

ಪ್ರಾಚೀನ ಭಾರತೀಯ ಶೈಕ್ಷಣಿಕ ಪದ್ಧತಿ ಎಂದರೆ ಬಹುತೇಕರು ತಿರಸ್ಕಾರ ಭಾವದಿಂದ ನೋಡುತ್ತಾರೆ. ಏಕೆಂದರೆ ಕಳೆದ 200 ವರ್ಷಗಳಿಂದ ಪಡೆದ ಬ್ರಿಟಿಷ್ ಶಿಕ್ಷಣವು ಭಾರತೀಯ ಜೀವನ ಶೈಲಿಯನ್ನು ಮರೆಮಾಚುವ ಮತ್ತು ತಿರಸ್ಕಾರ ಭಾವದಿಂದ ನೋಡುವ ಮನೋಭಾವವನ್ನು ಅಪ್ರಜ್ಞಾಪೂರ್ವಕವಾಗಿ ನಮ್ಮಲ್ಲಿ ಬಿತ್ತಿದೆ. ಆದ್ದರಿಂದ ಪಾಶ್ಚಾತ್ಯರ ದೃಷ್ಟಿಕೋನದಿಂದಾಚೆಗೆ ನಮ್ಮನ್ನು ನಾವು ಅರ್ಥಮಾಡಿಕೊಳ್ಳುವ ಪ್ರಕ್ರಿಯೆ ಇಂದಿನ ತುರ್ತಾಗಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯು ಮತ್ತದೇ ಹಳೆಯ ಸಂಪ್ರದಾಯವನ್ನು ಮರುಸ್ಥಾಪಿಸುವ ಉದ್ದೇಶ ಹೊಂದಿದೆ ಎಂದು ನಾವು ಆಪಾರ್ಥ ಮಾಡಿಕೊಳ್ಳುವ ಆಗತ್ಯವಿಲ್ಲ. ಆದರ ಬದಲಿಗೆ ಆಂದಿನ ಶಿಕ್ಷಣದಲ್ಲಿದ್ದ ಮೌಲ್ಯಗಳನ್ನು, ಪರಂಪರೆಗಳನ್ನು ಹಾಗೂ ಜೀವನ ಕೌಶಲ್ಯವನ್ನು ಬೆಳೆಕಿಗೆ ತರುವ ಪ್ರಯತ್ನ ಇದಾಗಿದೆ.

ಹಿಂದೆ ವೇದ, ವಿಜ್ಞಾನ, ಗಣಿತಗಳನ್ನು ಹಾಗೂ ಕೆಲವು ಪ್ರಾಯೋಗಿಕ ವಿದ್ಯೆಗಳನ್ನು ಕಲಿಸುವ ಪದ್ಧತಿ ನಮ್ಮಲ್ಲಿತ್ತು. ಇಂದು ಬಹುಶಿಸ್ತೀಯ ಅಧ್ಯಯನದ ಕುರಿತು ಕೇಳಿ ಬರುತ್ತಿರುವ ಕೂಗು

ನಮ್ಮಲ್ಲಿ ಪ್ರಾಯೋಗಿಕವಾಗಿಯೇ ಬಹು ಹಿಂದೆ ಆಸ್ತಿತ್ವದಲ್ಲಿತ್ತು. ಜೀವನಕ್ಕೆ ಆಗತ್ಯವಿರುವ ಕೌಶಲಗಳನ್ನು ಕಲಿಸುವುದೇ ಆಂದಿನ ಶಿಕ್ಷಣದ ಪ್ರಧಾನ ಆಶಯವಾಗಿತ್ತು. ಇದರ ಮೂಲಕ ಜೀವನಕ್ಕೆ ಆಗತ್ಯವಿರುವ ಸರ್ವವಿದ್ಯೆಗಳನ್ನು ವಿವಿಧ ಹಂತಗಳಲ್ಲಿ ಕಲಿಸುವ ಮೂಲಕ ಶಿಕ್ಷಣವು ಜೀವನ ವಿಧಾನವನ್ನು ರೂಪಿಸುವ ಕಾರ್ಯ ಮಾಡುತ್ತಿತ್ತು. ಆದರೆ ಇಂತಹ ವೈಧಾನಿಕತೆ ಮೆಕಾಲೆಯ ಶಿಕ್ಷಣ ಬಂದ ತರುವಾಯ ಮೂಲಗುಂಡಾಯಿತು ಎನ್ನುವುದು ಸತ್ಯ.

ಯುರೋಪಿಗೂ ಮಾದರಿ

ಭಾರತವು ಇಂತಹ ಶಿಕ್ಷಣ ಪದ್ಧತಿಯನ್ನು ರೂಢಿಸಿಕೊಂಡ ಹಲವಾರು ಶತಮಾನದ ನಂತರ ಪಾಶ್ಚಿಮಾತ್ಯ ರಾಷ್ಟ್ರದಲ್ಲಿ ಜ್ಞಾನೋದಯವಾಯಿತು. ಆದರಲ್ಲಿಯೂ ವಿಶೇಷವಾಗಿ 19ನೇ ಶತಮಾನದ ಆದಿಯಲ್ಲಿ ಉನ್ನತ ಶಿಕ್ಷಣದ ಕುರಿತು ಹಲವಾರು ಚಿಂತನೆಗಳು ಜರ್ಮನಿಯಲ್ಲಿ ಉದಯಿಸಿದವು. ಆದರಲ್ಲಿ ಪ್ರಮುಖವಾಗಿ ಹಂಬೋಲ್ಟ್ ಮಾದರಿಯನ್ನು ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲು ಪ್ರಾರಂಭವಾಯಿತು. ಈ ಮಾದರಿಯ ಪ್ರಕಾರ ಶಿಕ್ಷಣವು ಸಂಶೋಧನೆ ಮತ್ತು ಅಧ್ಯಯನದ ಸಮ್ಮಿಲನವಾಗಿ, ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿರಬೇಕು. ಈ ಮಾದರಿಯನ್ನು ವಿಲಿಯಮ್ ವೊನ್ ಹಂಬೋಲ್ಟ್ ಎನ್ನುವ ಪರ್ಷಿಯಾ ದಾರ್ಶನಿಕರು ಪರಿಚಯಿಸಿದರು. ಬರ್ಲಿನ್‌ನಲ್ಲಿ ಇಂತಹ ಚಿಂತನೆಯನ್ನು ಇಟ್ಟುಕೊಂಡು ಒಂದು ವಿಶ್ವವಿದ್ಯಾಲಯ ಸ್ಥಾಪಿಸುವ ಮೂಲಕ ಸರ್ವತೋಮುಖಿ ಅಭಿವೃದ್ಧಿಗೆ ಪೂರಕವಾದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಈ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳುತಮ್ಮ ಇಚ್ಛೆಯ ವಿಷಯಗಳನ್ನು ಬಹುಶಿಸ್ತೀಯವಾಗಿ ಅಧ್ಯಯನ ಮಾಡುವ ಅವಕಾಶವಿತ್ತು. ಒಟ್ಟಿನಲ್ಲಿ ಸ್ವಾಯತ್ತ ವ್ಯಕ್ತಿತ್ವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಿ ಮುಂದೆ ವಿಶ್ವನಾಗರಿಕರನ್ನಾಗಿ ಮಾಡುವ ಉದ್ದೇಶ ಈ ಮಾದರಿಯಲ್ಲಿತ್ತು. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, ಭಾರತದಲ್ಲಿ ಪುರಾತನ ಕಾಲದಲ್ಲೇ ಇದ್ದಂತಹ ಶಿಕ್ಷಣ ಮಾದರಿಯು ಯುರೋಪಿನಲ್ಲಿ 19ನೇ ಶತಮಾನದವರೆಗೂ ಇರಲಿಲ್ಲ.

ಮೌಲ್ಯಾಧಾರಿತ ಶಿಕ್ಷಣ

ಮೇಲಿನ ಎರಡೂ ನಿದರ್ಶನಗಳನ್ನು ನೋಡಿದ ನಂತರ ಹೊಸ ಶಿಕ್ಷಣ ನೀತಿಯನ್ನು ಒರೆಗೆ ಹಚ್ಚುವುದು ಹೆಚ್ಚು ಸೂಕ್ತ. ಕಳೆದ 200 ವರ್ಷಗಳಿಂದ ಬೆಳೆದುಬಂದ ಮೆಕಾಲೆ ಶಿಕ್ಷಣ ಪದ್ಧತಿಯಲ್ಲಿ ಕಾಲಕ್ರಮೇಣಬಹುಶಿಸ್ತೀಯಅಧ್ಯಯನಕಣ್ಮರೆಯಾಗತೊಡಗಿತು. ಅಧ್ಯಯನದ ವಿಷಯಗಳನ್ನು ಹಲವಾರು ವಿಭಾಗಗಳನ್ನಾಗಿ ವಿಂಗಡಿಸಿಕೊಳ್ಳಲಾಯಿತು. ಆದರೆಇದರಮೂಲಕ ವಿದ್ಯಾರ್ಥಿಗಳು ಕೂಪಮಂಡೂಕಗಳಾಗುತ್ತಾ ಬಂದರು. ಈ ಹಿಂದೆ ಬಿಡುಗಡೆಯಾದ 'ಫಸ್ಟ್ ರ್ಯಾಂಕ್ ರಾಜು' ಎಂಬ ಚಲನಚಿತ್ರ ಇಂತಹ ವ್ಯಂಗ್ಯ ಪರಿಸ್ಥಿತಿಯನ್ನು ಸೊಗಸಾಗಿ ಚಿತ್ರಿಸಿದೆ.

ಇಂತಹ ಕೂಪದಿಂದ ವಿದ್ಯಾರ್ಥಿಗಳನ್ನು ಹೊರತಂದು ಕೌಶಲ್ಯಯುಕ್ತ ಮತ್ತು ಸಾಮಾಜಿಕ ಮೌಲ್ಯಾಧಾರಿತ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ದಿಟ್ಟ ಹೆಜ್ಜೆಯನ್ನು ಇಟ್ಟಿದೆ. ಇದರ ನೀತಿ ನಿಯಮಗಳು ಆಸ್ಪಷ್ಟ ಸ್ವರೂಪದಲ್ಲಿದ್ದರೂ ಆಶಯ ಮಾತ್ರ ಗಟ್ಟಿಯಾಗಿದೆ. ಭವಿಷ್ಯದ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆ ಹಾಗೂ ಅವರ ಜೀವನಕ್ಕೆ ಆಗತ್ಯವಿರುವ ಕೌಶಲಗಳನ್ನು ಶಿಕ್ಷಣದಿಂದ ಪಡೆಯುವುದೇ ಈ ನೀತಿಯ ಮುಖ್ಯ ಗುರಿ. ಇಂತಹ ಶಿಕ್ಷಣ ಪದ್ಧತಿಯನ್ನು ಆಳವಡಿಸಿಕೊಳ್ಳುವುದು ವಿಶ್ವವಿದ್ಯಾಲಯಗಳ ಕರ್ತವ್ಯ. ಹಾಗೂ ಹಲವಾರು ವಿಶ್ವವಿದ್ಯಾಲಯಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿವೆ. ಅಂತಹ ವಿಶ್ವವಿದ್ಯಾಲಯಗಳ ಸಾಲಿನಲ್ಲಿ ಗದಗಿನ ವಿವಿಯೂ ಒಂದಾಗಿದೆ.

ಆಯ್ಕೆಗೆ ಅವಕಾಶವಿದೆ

ಗದಗ ಜಿಲ್ಲೆಯಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವುಹೊಸರಾಷ್ಟ್ರೀಯಶಿಕ್ಷಣನೀತಿಯಹಿನ್ನೆಲೆಯಲ್ಲಿ ಪದವಿ ಕೋರ್ಸುಗಳನ್ನು ಪ್ರಾರಂಭಿಸಲು ನಿರ್ಧರಿಸಿರುವುದು ಆಶಾದಾಯಕವಾದ ಬೆಳವಣಿಗೆ. ಪಿಯುಸಿ ಮುಗಿಸಿದ ವಿದ್ಯಾರ್ಥಿಗಳು ಕಲಾ ವಾಣಿಜ್ಯ ಮತ್ತು ವಿಜ್ಞಾನದಲ್ಲಿ ತಮಗೆ ಇಷ್ಟವಾದ ವಿಷಯಗಳ ಜೊತೆಗೆ ತಮ್ಮ ಆಸಕ್ತಿಗಳಿಗೆ ಅನುಗುಣವಾಗಿ ಇತರ ವಿಷಯಗಳನ್ನೂ ಅಧ್ಯಯನ ಮಾಡಬಹುದಾಗಿದೆ. ನಾಲ್ಕು ವರ್ಷದ ಈ ಪದವಿ ಕೋರ್ಸಿನಲ್ಲಿ ವಿವಿಧ ಹಂತದ ಪ್ರವೇಶ ಮತ್ತು ನಿರ್ಗಮನದ ಅವಕಾಶಗಳಿವೆ. ಪದವಿಗೆ ಸೇರ್ಪಡೆಯಾಗಿ ಮೊದಲ ವರ್ಷ ಪೂರೈಸಿದರೆ ಸರ್ಟಿಫಿಕೆಟ್ ಕೋರ್ಸ್ ಪಡೆಯಬಹುದು. ಎರಡನೇ ವರ್ಷ ಪೂರೈಸಿದರೆ ಡಿಪ್ಲೊಮಾ ಕೋರ್ಸ್ ಪಡೆಯಬಹುದು. ಮೂರು ವರ್ಷ ಪೂರೈಸಿದರೆ ಆದನ್ನು ಪದವಿ ಎಂದು ಪರಿಗಣಿಸಲಾಗುತ್ತದೆ. ನಾಲ್ಕನೇ ವರ್ಷವನ್ನೂ ಪೂರೈಸಿದರೆ ಆದನ್ನು ಗೌರವ ಪದವಿ (ಆನರ್ಸ್) ಎಂದು ಪರಿಗಣಿಸಲಾಗುತ್ತದೆ. ನಾಲ್ಕು ವರ್ಷ ಗೌರವ ಪದವಿಯನ್ನು ಮೂರ್ಣಗೊಳಿಸಿದ ವಿದ್ಯಾರ್ಥಿಯು ಕೇವಲ ಒಂದು ವರ್ಷ ಸ್ನಾತಕೋತ್ತರ ಪದವಿ ಪಡೆದರೆ ಸಾಕಾಗುತ್ತದೆ. ಆಂದರೆ ಗೌರವ ಪದವಿ ಪಡೆದ ನಂತರ ಸ್ನಾತಕೋತ್ತರ ಪದವಿ ಕೇವಲ ಒಂದು ವರ್ಷ ಮಾತ್ರವಿರುತ್ತದೆ.

ಶೈಕ್ಷಣಿಕ ಕ್ರೆಡಿಟ್ ಬ್ಯಾಂಕ್

ಇದರೊಂದಿಗೆ ಶೈಕ್ಷಣಿಕ ಕ್ರೆಡಿಟ್ ಬ್ಯಾಂಕನ್ನು ಯುಜಿಸಿಯು ಪರಿಚಯಿಸುತ್ತಿದ್ದು, ವಿದ್ಯಾರ್ಥಿಗಳು ಎಲ್ಲೇ ವಿದ್ಯಾಭ್ಯಾಸ ಮಾಡಿದರೂ ಆನ್‌ಲೈನ್‌ನಲ್ಲಿ ಅವರ ವಿದ್ಯಾಭ್ಯಾಸದ ಕ್ರೆಡಿಟ್ ಸೇರುತ್ತಾ ಹೋಗುತ್ತದೆ. ಇದರಿಂದಾಗಿ ವಿದ್ಯಾರ್ಥಿಗಳ ಅಧ್ಯಯನ ಡಿಸ್‌ಕಂಟಿನ್ಯೂ ಆಗುವುದಿಲ್ಲ. ಅವರು ಎಷ್ಟು ಕ್ರೆಡಿಟ್ ಪಡೆದಿರುತ್ತಾರೋ ಅದರ ಆಧಾರ ಮೇಲೆ ಅವರು ಸರ್ಟಿಫಿಕೆಟ್, ಡಿಪ್ಲೊಮಾ, ಸ್ನಾತಕದಂತಹ ಪದವಿಗಳನ್ನು ಪಡೆದಿದ್ದಾರೆ ಎಂದು ಪರಿಗಣಿಸಲಾಗುತ್ತದೆ. ಇದರಜೊತೆಗೆವಿದ್ಯಾರ್ಥಿಗಳಸರ್ವಾಂಗೀಣ ಬೆಳವಣಿಗೆಗಾಗಿ ಆಗತ್ಯವಿರುವ ಪಠ್ಯಕ್ರಮವನ್ನು ಯುಜಿಸಿಯು ಮಾರ್ಗಸೂಚಿಯ ಅನುಸಾರ ಅಭಿವೃದ್ಧಿಪಡಿಸಲಾಗಿದೆ. ಒಟ್ಟಿನಲ್ಲಿ ಹೊಸ ಶಿಕ್ಷಣ ನೀತಿಯು ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದಲ್ಲಿ ಪ್ರಾರಂಭವಾಗುತ್ತಿರುವ ಪದವಿ ಕೋರ್ಸುಗಳ ಪ್ರಯೋಜನವನ್ನು ವಿದ್ಯಾರ್ಥಿಗಳು ಹೆಚ್ಚಿನದಾಗಿ ಪಡೆಯುವ ಮೂಲಕ ಕೌಶಲಯುಕ್ತ ವ್ಯಕ್ತಿಗಳಾಗಿ ಹೊಯ್ದೊಮ್ಮಬಹುದು.

ಕನ್ನಡಪ್ರಭ Fri, 27 August 2021
https://kpepaper.asianetnews.com/c/62724714